O.S . 69/22    PW – 1

ದಿನಾಂಕಃ      20-06-2023
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ವಾದಿ ಪರ Sri D.G ವಕೀಲರಿಂದಃ**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು. ನಾನು ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಬರೆದ ಎಲ್ಲಾ ಸಂಗತಿಗಳು ಸರಿ ಇದೆ. ಅದರಲ್ಲಿ ಇರುವ ರುಜು ನನ್ನ ರುಜುವಾಗಿದೆ.

ವಾದಿಯು ಹಾಜರುಪಡಿಸಿದ , ತಾಃ 3-6-2011 ರ ನೋಂದಾಯಿತ ಕ್ರಯಪತ್ರವನ್ನು ನಿಪಿ.1 ಎಂದು, ಆಸ್ತಿ ತೆರಿಗೆ ರಿಜಿಸ್ಟರ್ ಎಕ್ಸಟ್ರಾಕ್ಟನ್ನು ನಿ.ಪಿ.2 ಎಂದು, ಆಸ್ತಿ ತೆರಿಗೆ ಬೇಡಿಕೆ ಎಕ್ಸಟ್ರಾಕ್ಟನ್ನು ನಿಪಿ.3 ಎಂದು, ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನಿಪಿ.4 ಎಂದು, ಆರು ಚಲನ್ನುಗಳನ್ನು ನಿ.ಪಿ.5 ರಿಂದ 10 ಎಂದು, ಒಂದು ರಶೀತಿಯನ್ನು ನಿ.ಪಿ.11 ಎಂದು, ಆಸ್ತಿ ತೆರಿಗೆ ಸ್ವಯಂ ನಿರ್ಧರಣಾ ನಮೂನೆಯನ್ನು ನಿ.ಪಿ.12 ಎಂದು ಗುರುತಿಸಲಾಯಿತು. ಆದ್ದರಿಂದ , ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಬೇಕಾಗಿ ಕೋರುತ್ತೇನೆ.

**ಪಾಟೀ ಸವಾಲುಃ-** ಪ್ರತಿವಾದಿಯರು ಲಿಖಿತ ಹೇಳಿಕೆಯನ್ನು ಸಲ್ಲಿಸದ ಕಾರಣ, ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.